ನಡೆಯುತ್ತಿರುವ ಹೋರಾಟ. ನಿಮ್ಮ ಹಕ್ಕು ಇರುವ ಜಮೀನಿಗೆ ನೀವು ಪ್ರವೇಶ ಮಾಡುವುದು ಹೇಗೆ ಕಾನೂನುಬಾಹಿರವಾಗುತ್ತದೆ? ಈ ಭೂಮಿಯನ್ನು ಉಳುಮೆ ಮಾಡುವುದು ಹೇಗೆ ಕಾನೂನುಬಾಹಿರವಾಗುತ್ತದೆ?

ನಾನು ಈಗ ಹೇಳುತ್ತಿದ್ದೇನೆ, ಕೇಳಿ! ಆ ಜಮೀನಿಗೆ ಪ್ರವೇಶಿಸಲು ಮತ್ತು ಅಲ್ಲಿ ಉಳುಮೆ ಮಾಡಲು ತಡೆ ಒಡ್ಡುತ್ತಿರುವ ಸರ್ಕಾರ ಕಾನೂನಿನ ಪ್ರಕಾರ ನಡೆಯುತ್ತಿಲ್ಲ. ಆದ್ದರಿಂದ ಸ್ವತಂತ್ರ ಭಾರತದ ಪ್ರಜೆಗಳಾಗಿ ಅಂಥ ಸರ್ಕಾರದ ಆಜ್ಞೆಗಳನ್ನು ಧಿಕ್ಕರಿಸುವುದು ನಮ್ಮ ಕರ್ತವ್ಯ. ಬನ್ನಿ! ...ನಮ್ಮ ಹಕ್ಕಿನ ಜಮೀನಿಗೆ ನಾವು ಪ್ರವೇಶ ಮಾಡೋಣ!'

ಹೀಗೆಂದ ಲೋಹಿಯಾ ರೈತರ ಉಳುಮೆ ಹಕ್ಕಿನ ಭೂಮಿಯ ಕಡೆಗೆ ಅಡಿಯಿರಿಸಿದರು. ರೈತ ಸಮುದಾಯ ಘೋಷಣೆ ಕೂಗತೊಡಗಿತು:

'ಇಂಕಿಲಾಬ್ ಜಿಂದಾಬಾದ್'

'ಮಹಾತ್ಮ ಗಾಂಧೀ ಜಿಂದಾಬಾದ್'

'ಉಳುವವನೇ ನೆಲದೊಡೆಯ'

'ಡಾ. ಲೋಹಿಯಾ ಜಿಂದಾಬಾದ್'

ರೈತ ಸಮುದಾಯ ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಾ ಲೋಹಿಯಾರನ್ನು ಹಿಂಬಾಲಿಸಿತು. ಜಮೀನಿನ ಸುತ್ತಲೂ ಬೇಲಿಯಂತೆ ನಿಂತಿದ್ದ ಬಂದೂಕುಧಾರಿ ರಿಸರ್ವ್ ಪೊಲೀಸ್ ಪಡೆ ಗರ ಬಡಿದಂತೆ ನಿಂತಿತು.

ಜಮೀನಿಗೆ ಹಾಕಿದ್ದ ಬೇಲಿಯನ್ನು ಲೋಹಿಯಾ ಕಿತ್ತೊಗೆದರು. ಗದ್ದೆಗೆ ಕಾಲಿರಿಸಿದರು. ಎತ್ತುಗಳ ಹೆಗಲೇರಿ ಸಿದ್ಧವಾಗಿದ್ದ ನೇಗಿಲನ್ನು ಭೂಮಿಗೆ ಹೂಡಿದರು. ಅವರನ್ನು ಹಿಂಬಾಲಿಸಿದ್ದ ರೈತರ ಜಯಘೋಷ ಮುಗಿಲು ಮುಟ್ಟಿತು. ಲೋಹಿಯಾ ಮಣ್ಣಿನ ಮಕ್ಕಳೊಡನೆ ಗೇಣಿದಾರರ ಭೂಮಿಯನ್ನು ನೇಗಿಲಿನಿಂದ ಉಳುಮೆ ಮಾಡಿದರು.'

ನಂತರ ಕಾಗೋಡಿನ ಬೀದಿಗಳಲ್ಲಿ ಗೇಣಿದಾರ ರೈತರ ಹಾಗೂ ಸಮಾಜವಾದಿಗಳ ಸುಮಾರು 500 ಜನ ಸತ್ಯಾಗ್ರಹಿಗಳ ಮೆರವಣಿಗೆ ಹೊರಟಿತು. ಊರು ಸ್ತಬ್ದವಾಗಿತ್ತು. ವಾತಾವರಣ ಬಿಗುವಾಗಿತ್ತು. ಆದರೆ ಸಾವಿರಾರು ವರ್ಷಗಳಿಂದ ಸ್ಥಗಿತವಾಗಿದ್ದ ಚರಿತ್ರೆಯ ಚಕ್ರ ಗೇಣಿದಾರರ ಪರವಾಗಿ ವಾಲಿತ್ತು!

ಅವತ್ತು ಲೋಹಿಯಾ ಜೊತೆ ಹೆಜ್ಜೆ ಹಾಕಿದ್ದ ಮಿಣುಕಮ್ಮ ಆರಗದಲ್ಲಿ 2017ರವರೆಗೂ ಬದುಕಿದ್ದರು. ಹಿಂದೆ ಈ ಜೀವನ ಚರಿತ್ರಕಾರ ಶಾಂತವೇರಿ ಗೋಪಾಲಗೌಡರ ಜೀವನ ಚರಿತ್ರೆ ಬರೆಯಲು ಕಾಗೋಡು ಸತ್ಯಾಗ್ರಹ ನಡೆದ ಸುತ್ತಮುತ್ತಲ ಪ್ರದೇಶಗಳಿಗೆ ಭೇಟಿ ಕೊಟ್ಟಾಗ ಮಿಣುಕಮ್ಮ ಸಿಕ್ಕರು; 1951ರಲ್ಲಿ 'ಉಳುವವನೇ ನೆಲದೊಡೆಯ' ಎಂದು ಕೂಗಿದ ಧಾಟಿಯಲ್ಲೇ ಘೋಷಣೆ ಕೂಗಿ ತೋರಿಸಿದರು. ಡಾಕ್ಟರ್ ಸಾಹೇಬರು ತಮ್ಮ ಜೊತೆ ಹಿಂದಿಯಲ್ಲಿ ಮಾತಾಡುತ್ತಾ, 'ನಿನ್ನ ಹೆಸರು ಮಿಣುಕಮ್ಮ ಅಲ್ಲ, ಮೇನಕಮ್ಮ!' ಎಂದಿದ್ದನ್ನು ಮಿಣುಕಮ್ಮ ನೆನೆಸಿಕೊಂಡು ನಾಚಿಕೊಂಡರು; ಅಷ್ಟೊತ್ತಿಗಾಗಲೇ ಅವರಿಗೆ ಎಂಬತ್ತು ವರ್ಷವಾಗಿತ್ತು.

ಮೆರವಣಿಗೆಯ ನಂತರ ಲೋಹಿಯಾ ಸಾಗರ ರೈಲ್ವೇ ನಿಲ್ದಾಣದ ವಿಶ್ರಾಂತಿ ಗೃಹಕ್ಕೆ ಬಂದರು. ಮಧ್ಯರಾತ್ರಿ ಒಂದು ಗಂಟೆಯ ಹೊತ್ತಿಗೆ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಗಳು ಬಂದು ಲೋಹಿಯಾರನ್ನು ಬಂಧಿಸಿ, ಸಾಗರ ಪೊಲೀಸ್ ಠಾಣೆಯ ಲಾಕಪ್ಪಿನಲ್ಲಿಟ್ಟರು. ಲೋಹಿಯಾ ಇಂಟರ್‌ಮೀಡಿಯೆಟ್ ಓದುತ್ತಿದ್ದಾಗ ಕಲ್ಕತ್ತಾದ 'ಕಾಲಾ ಕೊಠಡಿ' ಕುರಿತು ಚರಿತ್ರೆಯ ಪಾಠದಲ್ಲಿದ್ದ ಉತ್ಪ್ರೇಕ್ಷೆಯನ್ನು ಟೀಕಿಸಿದ್ದರು; ಸಾಗರದ ಲಾಕಪ್‌ನಲ್ಲಿ ಕೂತ ಅವರಿಗೆ ಆ 'ಬ್ಲಾಕ್‌ಹೋಲ್' ನೆನಪಾಯಿತು! ತಮ್ಮ ಜೊತೆ ಬಂಧನಕ್ಕೊಳಗಾಗಿದ್ದ ಖಾದ್ರಿ ಶಾಮಣ್ಣ, ಎಂ.ಪಿ. ಈಶ್ವರಪ್ಪ, ಗುರುರಾಜ್, ಮುಲ್ಕಾ ಗೋವಿಂದ ರೆಡ್ಡಿ ಮೊದಲಾದವರ ಜೊತೆ ಕೂತಿದ್ದ ಲೋಹಿಯಾ ಹಾಗೇ ಕಲ್ಲು ನೆಲದ ಮೇಲೆ ನಿದ್ದೆಗೆ ಜಾರಿದರು.

ಬೆಳಕು ಹರಿಯುವ ಮುನ್ನ ಯಾರೋ ಖಾದ್ರಿ ಶಾಮಣ್ಣನವರೊಡನೆ ಪಿಸುಮಾತಿನಲ್ಲಿ ಮಾತಾಡುತ್ತಿದ್ದರು. ಲೋಹಿಯಾಗೆ ಎಚ್ಚರವಾಯಿತು.

ಸೀತಾರಾಮ ಅಯ್ಯಂಗಾರ್ ಮತ್ತು ಲೋಕಪಾಲ್ ಕಂಡರು. ಅವರಿಬ್ಬರೂ ಹಿಂದಿನ ರಾತ್ರಿ ಪೊಲೀಸರು ಸತ್ಯಾಗ್ರಹಿಗಳನ್ನು ಬಂಧಿಸಲು ರೈಲ್ವೆ ನಿಲ್ದಾಣಕ್ಕೆ ಬಂದಿದ್ದಾಗ ವಿಶ್ರಾಂತಿ ಗೃಹದ ನೀರಿನ ಟ್ಯಾಂಕ್ ಹತ್ತಿ ತಪ್ಪಿಸಿಕೊಂಡಿದ್ದರು. ಬೆಳಗ್ಗೆ ಲೋಹಿಯಾರನ್ನು ಕಾಣಲು ಠಾಣೆಗೆ ಬಂದಿದ್ದರು.

'ಏನು! ನೀವೂ ದಸ್ತಗಿರಿಯಾಗಿಬಿಟ್ಟಿರಾ?' ಎಂದರು ಲೋಹಿಯಾ.

'ಇಲ್ಲ. ನಾವು ಸೆಂಟ್ರಿಯ ಮನವೊಲಿಸಿ, ನಿಮ್ಮ ಅಗತ್ಯಗಳೇನು ಎಂದು ತಿಳಿಯಲು ಬಂದೆವು' ಎಂದು ಅವರು ಹೇಳಿದರು.

'ಅಚ್ಛಾ! ಐಸೆ ಕರೋ' ಎಂದ ಲೋಹಿಯಾ ಕೆಲವು ಕೇಬಲ್‌ಗಳನ್ನು ಜರ್ಮನಿಗೆ ಮತ್ತು ಅಮೆರಿಕಕ್ಕೆ ಕಳಿಸಬೇಕು, ಅಲ್ಲಿಗೆ ಸುದ್ದಿ ಮುಟ್ಟಿಸಬೇಕು ಎಂದು ಹೇಳಿ ಅಲ್ಲಿನ ವಿಳಾಸಗಳನ್ನೂ, ಅಲ್ಲಿಗೆ ಕಳಿಸಬೇಕಾಗಿದ್ದ ಕೇಬಲ್ ಸಂದೇಶಗಳನ್ನೂ ಹೇಳುತ್ತಾ ಹೋದರು. ಖಾದ್ರಿ ಶಾಮಣ್ಣ ಅದನ್ನೆಲ್ಲಾ ಬರೆದು, ಅಯ್ಯಂಗಾರರ ಕೈಗೆ ಕೊಟ್ಟು ಕಳಿಸಿದರು. ಲೋಹಿಯಾ ಮತ್ತೆ ಮಲಗಿದರು.

ಮಾರನೆಯ ದಿನ ಸಾಗರ ಕೋರ್ಟಿನಲ್ಲಿ ಲೋಹಿಯಾ ಹಾಗೂ ಸಂಗಾತಿಗಳನ್ನು ಹಾಜರು ಮಾಡಿದರು. ಕೋರ್ಟು ಅವರನ್ನು ಜೂನ್ 20ರವರೆಗೆ ಜುಡಿಷಿಯಲ್ ಕಸ್ಟಡಿಯಲ್ಲಿಡಲು ಆಜ್ಞೆ ಮಾಡಿತು. ಲೋಹಿಯಾ ಹಾಗೂ ಸಂಗಾತಿಗಳನ್ನು ಶಿವಮೊಗ್ಗದ ಜೈಲಿಗೆ ಕರೆ ತಂದರು. ಅಲ್ಲಿದ್ದ ಇನ್ನಿತರ ಸತ್ಯಾಗ್ರಹಿಗಳ ಸ್ಥಿತಿ ಕರುಣಾಜನಕವಾಗಿತ್ತು. ಸತ್ಯಾಗ್ರಹಿಗಳ ಬೆಂಬಲಿಗರು ಹೊರಗಿನಿಂದ ತಂದುಕೊಡುತ್ತಿದ್ದ ಊಟ ಅವರಿಗೆ ಒಪ್ಪೊತ್ತಿಗೂ ಸಾಲುತ್ತಿರಲಿಲ್ಲ.

ಮಾರನೆಯ ದಿನ ಪೊಲೀಸರು ಲೋಹಿಯಾ ಅವರನ್ನು ಬೆಂಗಳೂರಿಗೆ ಕರೆದೊಯ್ಯಲಿದ್ದರು. ಹೊರಡುವ ಮುನ್ನ ಲೋಹಿಯಾ ತಮ್ಮ ಜೇಬಲ್ಲಿದ್ದ ಮೂವತ್ತೆರಡು ರೂಪಾಯಿಗಳನ್ನೂ ಸತ್ಯಾಗ್ರಹಿಗಳಿಗೆ ಕೊಟ್ಟು ಊಟ ತರಿಸಿಕೊಳ್ಳಲು ಹೇಳಿದರು. ಗೆಳೆಯರು ಬೇಡಬೇಡವೆಂದರೂ ಲೋಹಿಯಾ ಕೇಳಲಿಲ್ಲ. ಪೊಲೀಸರು ಲೋಹಿಯಾರನ್ನು ಮೂರನೇ ದರ್ಜೆ ರೈಲ್ವೆ ಬೋಗಿಯಲ್ಲಿ ಬೆಂಗಳೂರಿಗೆ ಕರೆದೊಯ್ದರು.

ಲೋಹಿಯಾರನ್ನು ಬೆಂಗಳೂರಿನ 'ಕ್ರೆಸೆಂಟ್ ಹೌಸ್' ಸರ್ಕಾರಿ ಬಂಗಲೆಯಲ್ಲಿ ಬಂಧನದಲ್ಲಿಟ್ಟರು; ಇಂಗ್ಲಿಷ್ ಮಾದರಿಯ ಭವ್ಯ ಗೆಸ್ಟ್ ಹೌಸ್‌ನಲ್ಲಿರಲು ಲೋಹಿಯಾ ಒಪ್ಪಲಿಲ್ಲ. 'ತುಮ್ಹಾರ ಜೈಲ್ ಲೇ ಚಲೋ' ಎಂದರು. ಮತ್ತೆ ಲೋಹಿಯಾರನ್ನು ಸಾಗರದ ಕೋರ್ಟಿಗೆ ಒಯ್ಯಲಾಯಿತು. ಮೊಕದ್ದಮೆ ಮುಂದೂಡಿದ್ದರಿಂದ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕರೆತರಲಾಯಿತು. ಜೂನ್ 21ರಂದು ಲೋಹಿಯಾ ಪರವಾಗಿ ಸಲ್ಲಿಸಲಾದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿ, ಜಾಮೀನಿನ ಮೇಲೆ ಬಿಡುಗಡೆಯಾಗಲು ಹೇಳಿತು; ಲೋಹಿಯಾ ಒಪ್ಪಲಿಲ್ಲ!

ಲೋಹಿಯಾ ಬಂಧನ ದೇಶಾದ್ಯಂತ ಸುದ್ದಿಯಾಯಿತು. ಲೋಹಿಯಾ ಫ್ರಾಂಕ್‌ಫರ್ಟ್ ಸಮ್ಮೇಳನದ ನಂತರ ಅಮೆರಿಕಕ್ಕೂ ಹೋಗಬೇಕಾಗಿತ್ತು; ಹೀಗಾಗಿ ಇದು ಅಮೆರಿಕದಲ್ಲೂ ಸುದ್ದಿಯಾಯಿತು. ಪಾಟ್ನಾದಲ್ಲಿದ್ದ ಜೆ.ಪಿ. 'ಲೋಹಿಯಾರಂಥ ನಾಡು ಕಟ್ಟುವ ಪ್ರತಿಭಾಶಾಲಿಯನ್ನು ಬಂಧನದಲ್ಲಿಟ್ಟಿರುವುದು ಯಾವ ಯೋಗ್ಯ ಸರ್ಕಾರಕ್ಕಾಗಲೀ ನಾಚಿಕೆಗೇಡಿನ ವಿಷಯ' ಎಂದು ಹೇಳಿಕೆ ಕೊಟ್ಟರು.

22 ಜೂನ್ 1951. ರಾತ್ರಿ 8.30ರ ಹೊತ್ತಿಗೆ ಲೋಹಿಯಾ ಬಿಡುಗಡೆಯಾಯಿತು. ರಾಜ್ಯ ಸರ್ಕಾರ ಅವರ ಮೇಲಿದ್ದ ಕೇಸುಗಳನ್ನು ವಾಪಸ್ ಪಡೆಯಿತು. ಅದರ ಕಾರಣ ನಿಗೂಢವಾಗಿಯೇ ಉಳಿಯಿತು!

ಬಿಡುಗಡೆಯ ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರಿಗೆ ಲೋಹಿಯಾ ಹೇಳಿದರು:

'ಸಮಾಜವಾದಿಗಳು ದುಷ್ಟ ಶಕ್ತಿಗಳ ವಿರುದ್ಧ ಕಾನೂನನ್ನು ರಕ್ಷಿಸುವ ಪೊಲೀಸರಂತೆ ಕೆಲಸ ಮಾಡುತ್ತಿದ್ದಾರೆ. ಕಾಗೋಡು ಪ್ರಕರಣದಲ್ಲಿ ಭೂಮಿಯ ಒಡೆತನದ ಪ್ರಶ್ನೆ ಅಡಕವಾಗಿಲ್ಲ; ಬದಲಿಗೆ, ಭೂಮಿಯ ಸ್ವಾಧೀನದ ಪ್ರಶ್ನೆ ಅಡಕವಾಗಿದೆ. ಅಕ್ರಮವಾಗಿ ಹೊರದೂಡಲ್ಪಟ್ಟಿರುವ ರೈತರಿಗೆ ಭೂಮಿ ಸೇರಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್‌ನ 79ನೇ ವಿಧಿ ನನ್ನ ನಿಲುವನ್ನು ಸಂಪೂರ್ಣವಾಗಿ ಸಮರ್ಥಿಸುತ್ತದೆ.

ವಿವಾದ ಆರಂಭವಾದಾಗ ರೈತರು ಹಾಗೂ ಭೂಮಾಲೀಕರ ಮಧ್ಯೆ ಸರ್ಕಾರ ತಟಸ್ಥವಾಗಿರಬೇಕಾಗಿತ್ತು; ಈ ಪ್ರಶ್ನೆ ಸಿವಿಲ್ ದಾವೆಯ ಮೂಲಕ ಇತ್ಯರ್ಥಗೊಳ್ಳುತ್ತಿತ್ತು.

ನಾನು ಹಿಂದೆಯೂ ಕಾನೂನನ್ನು ಉಲ್ಲಂಘಿಸಿದ್ದೇನೆ. ಮುಂದೆಯೂ ಉಲ್ಲಂಘಿಸಬೇಕಾಗಿ ಬರಬಹುದು. ನ್ಯಾಯ ಹಾಗೂ ಸಮಾಜದ ಅವಶ್ಯಕತೆಗಳಿಗೆ ವಿರುದ್ಧವಾಗಿರುವ ಕಾನೂನುಗಳನ್ನು ಉಲ್ಲಂಘಿಸಲೇಬೇಕು.'

ಈ ನಡುವೆ ಸಮಾಜವಾದಿ ಪಕ್ಷದ ಅಂಗಸಂಸ್ಥೆಯಾದ 'ಹಿಂದ್ ಕಿಸಾನ್